## ಕಡೂರು ಡಿಸ್ಟ್ರಿಕ್ಟ್.

### ಅಬಸ್ಟ್ರಾಕ್ಟ್ ಇನ್ಸ್ತಿಹಾರ್.

ತಾರೀಖು 15ನೆ ಫೆಬ್ರವರಿ 1907.

ಯಡೆಹಳ್ಳಿ ಸಬ್ ತಾಲ್ಲೂಕಿನಲ್ಲಿ ಜವಿನಾನುದಾರರಾಗಿದ್ದ Mr. T. W. ಡಾರ್ಲಿಂಗ್ ಸಾಹೇಬರು ಮತ್ತು Mrs. J. D. ಡಾರ್ಲಿಂಗ್ ಬೀಬಿ ಸಾಹೇಬರವರಿಂದ ನೇರ್ಲೆಕೊಪ್ಪ ಮತ್ತು ಬಡಗಬೈಲು ಗ್ರಾಮಗಳಿಗೆ ಬರಬೇಕಾದ ಕಂದಾಯು ಬಾಕೀಗಾಗಿ ಇವರಿಗೆ ಸೇರಿದ ಸ್ಥಿರಾಸ್ತಿಯನ್ನು ಕಡೂರು ಡಿಸ್ಟ್ರಿಕ್ಟ್ ಯಡೆಹಳ್ಳಿ ಸಬ್ ತಾಲ್ಲೂಕು ಕಛೇರಿ ರೂಬರೂಬು ಡೆಪ್ಯುಟಿ ಅಮಲ್ದಾರ್ರಿಂದ 29—4—1907ರಲ್ಲಿ ಹರಾಜು ಮಾಡಲ್ಪಡುತ್ತಂತ ಇದರಿಂದ ಪ್ರಸಿದ್ಧಪಡಿಸಿದೆ.

ಹೆಚ್ಚಿನ ತಪಶೀಲುಗಳಿಗೆ 1907ನೆ ಇಸವಿ ಫೆಬ್ರವರಿ 28ನೆ ಮಂಗಳವಾರ ಮೈಸೂರು ಗೆಜೆಟ್ಟಿನ 2ನೆ ಭಾಗದ 63—64ನೆ ಪೇಜುಗಳನ್ನು ನೋಡಬೇಕು.

ಎಂ. ಲಕ್ಷ್ಮಣಸ್ವಾಮಿ,
ಫಾರ್ ಡೆಪ್ಯುಟಿ ಕಮಿಷನರ್.

---

## ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

### 1903–04ನೆ ಇಸವಿ ದಿವಾಳಿ ಕೇಸ್ ನಂಬರು 111.

ದಿವಾಳಿಯಾದ ಡಿಕ್ರಿ ದೇಣೇದಾರರು 1ನೆ ಅಹವ್ಮದ್ದಲ್ಲಿ, 2ನೆ ಮಹವ್ಮದವೊಕದಂಸಾಬರ ವಿಷಯದಲ್ಲಿ.

ಸ್ರ 1903–04ನೆ ಇಸವಿ ದಿವಾಳಿ ವ್ಯಾಜ್ಯದ ನಂಬರು 111.

ಹುಕ್ಕುಂ.

ಮೇಲ್ಕಂಡ ಅಹವ್ಮದ್ದಲ್ಲಿ-ಮಹವ್ಮದವೊಕದಂಸಾಬರು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಈ ಕೋರ್ಟು ರೂಬರೂ ಅರ್ಜಿದಾರರ ಪರವಾಗಿ ಹಾಜರಾದ ಅಡ್ವೋಕೇಟ್ ಮಿ॥ ಎಂ. ಎಲ್. ನರಸುಬ್ಬಯ್ಯಂಗಾರರ ಸಮಕ್ಷಮದಲ್ಲಿಯೂ ಮತ್ತು ಐಜ್ ಅರ್ಜಿದಾರರ ಲೇಣೇದಾರರಾದ 1—4 ಮತ್ತು 2ನೆ ಯವರ ತರಫು ಮಿ॥ ಅಡ್ವೋಕೇಟ್ ಎಂ. ಎ. ಕೃಷ್ಣಯ್ಯಂಗಾರ್ರು, ಅಡ್ವೋಕೇಟ್ ಮಿ॥ ಎಂ. ಸಿ. ರಂಗೈಯ್ಯಂಗಾರ್ರು ಮತ್ತು 1ನೆ ಗ್ರೇಡ್ ಪ್ಲೀಡರ್ ಮಿ॥ ಎಸ್. ನಾರಾಯಣರಾಯರು ಮತ್ತು 3 ಮತ್ತು 5ರ ಲಾಗಾಯಿತು 35ರ ವರಿಗಿನ ಎದುರು ಅರ್ಜಿದಾರ್ರು ಗೈರ್ ಹಾಜರು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರರಿಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ತಾನೆ ಖುದ್ದಾಗಿಯಾಗಲಿ, ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವುದಕ್ಕೆ ತಪ್ಸಿಹೋದರು ಯಾರಂದರೆ—3 ಮತ್ತು 5ರ ಲಾಗಾಯಿತು 35ರ ವರಿಗಿನ ಎದುರು ಅರ್ಜಿದಾರ್ರುಗಳು ಸದರೀ ಅರ್ಜಿದಾರ್ರು 1ನೆ ಮಹವ್ಮದಅಲ್ಲಿ–2ನೆ ಮಹವ್ಮದವೊಕದಂಸಾಬರು ದಿವಾಳಿಯಾದವರೆಂದುನ್ನು ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ದಾರರಾಗಿರುತ್ತಾರೆಂದು ಇದರಿಂದ ತೀರ್ಮಾನಿಸಲ್ಪಟ್ಟು ಇರುತ್ತದೆ. ಈ ಕೋರ್ಟು ಸಿರಸ್ತೆದಾರ್ರು ಮತ್ತು ನಾಜರು ಎಂ. ಸಿ. ಸುಬ್ರಾಯರು ಇನ್ನು ಮುಂದೆ ನಮೂದಾದಂತೆ ಜಾವಿನಾನು ಕೆಟ್ಟಕೂಜೆ ಐಜ್ ದಿವಾಳಿಯಾದವರ ಜೆಂದಗಿಗೆ ರಿಸೀವರಾಗಿ ಮೊಕರರ್ರಾಡಲ್ಪಡತಕ್ಕದ್ದೆಂದುನ್ನು ಸದರೀ ರಿಸೀವರಾದವರು ಪಡನೆ ದಿವಾಳಿಯಾದವರ ಜೆಂದಗಿಗೆ ಜವಾಬ್ ಮಾಡತಕ್ಕ ಬಗ್ಯೋ ನಿಗೇವಾನಿ ಮಾಡತಕ್ಕ ಬಗ್ಯೋ ಸಹ ಕೋರ್ಟಿನವರಿಂದ ಮಂಜೂರ್ರಾಡಬಹುದಾದಂಥಾ ಇಬ್ಬರು ಅಥವಾ ಹೆಚ್ಚು ಸಂಖ್ಯಾತವಾದ ಲಾಯಕ್ ಜಾರ್ಮಿದಾರರೊಡನೆ ಸಾಕಾದಷ್ಟು ಈಡಿನಿಂದ ಪತ್ರನನ್ನ ಬರದುಕೊಟ್ಟು ತನ್ನ ರಿಸೀವರ ಕೆಲಸಗಳಿಗೆ ಉದ್ಯುಕ್ತ ಪಡತಕ್ಕದ್ದೆಂದುನ್ನು ಮತ್ತು ಸದರಿ ರಿಸೀವರರು ತಾವು ನಡಸಿದ ಕೆಲಸಗಳ ಪ್ರತಿಫಲಕ್ಕಾಗಿ ದಿವಾಳಿಯಾದವರ ಲೇಣೇದಾರರಿಗೆ ಬಟವಾಡೆ ಮಾಡಿದ ಮೊಬಲಗಿನ ಬಾಕಿ ಹಣದಲ್ಲಿ ದರ ಸೇಕಡ (5) ಐದು ರೂಪಾಯಿ ಮೇರೆ ಕಮ್ಮಿಷನ್ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನು ಸಹ ಹುಕ್ಕುಂ ಮಾಡಲ್ಪಟ್ಟು ಇದೆ.

ಸ್ರ 1907ನೆ ಇಸವಿ ಮಾರ್ಚಿ ನೆ ತಾರೀಖಿನಲ್ಲಿ ಕೋರ್ಟು ಮೊಹರ್ ಸಮ್ಮುಖ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ಎಸ್. ವೆಂಕಟವರದ್ದ ಅಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

---

## ಕೊಲ್ಲೇಗಾಲ ಪೇಟೆ ಡಿವಿಜ್.

### ಇನ್ಸ್ತಿಹಾರ್ನಾಮೆ.

ಕೊಲ್ಲೇಪೇಟೆ, ತಾರೀಖು 27ನೆ ಫೆಬ್ರವರಿ 1907.

ಬೆಂಗಳೂರು ಡಿಸ್ಟ್ರಿಕ್ಟ್ ಕೊಲ್ಲೇಪೇಟೆ ಸಬ್ ಡಿವಿಜ್ ಸಾಹೇಬರವರ ಆಫೀಸಿನಿಂದ—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಸಬ್ ಡಿವಿಜ್ ಮಜಕೂರು ಬಾಬತು ಜೋಡಿ, ಕಾಯಂಗುತ್ತ ಇನಾಂ ಸರ್ವಮಾನ್ಯ ವಗೈರೆ ಗ್ರಾಮಗಳ ಬಾಬತು ಆಯಾಯ ಇನಾಂದಾರರಿಗೆ ಸಲ್ಲತಕ್ಕ ಟಾಡಿ ಹುಟ್ಟುವಳಿ ಹಕೀಯತ್ತನ್ನ ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ವಿಚಾರಣೆ ಮಾಡಲ್ಪಡುತ್ತೆ. ಆಯಾಯ ಗ್ರಾಮಗಳಿಗೆ ಸಂಬಂಧಪಟ್ಟ ಇನಾಂದಾರರುಗಳು ಸಾಕ್ಷ್ಯ ಮತ್ತು ತಮ್ಮಲ್ಲಿರತಕ್ಕ